# 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ

## ಎಸ್.ಸಿ .ನಂಃ 142/ 2022

**ಚಾಸಾ-2, ಪ್ರಾಸಾ-2**

| | | |
|---|---|---|
| ಸಾಕ್ಷಿದಾರರ ಹೆಸರು | : | ದೇವರಾಜು |
| ತಂದೆಯ ಹೆಸರು | : | ತಿಮ್ಮಪ್ಪ |
| ವಯಸ್ಸು | : | 61 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಆರನೇ ಹೊಸಕೋಟೆ, ಕೊಡಗು. |

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಿದ ದಿನಾಂಕಃ 05.03.2026**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-3, 4 ಹಾಗೂ 7 ರವರ ಪರಿಚಯ ನನಗೆ ಇರುತ್ತದೆ. ನಮ್ಮ ತಂದೆ ತಾಯಿಯರಿಗೆ ಒಟ್ಟು 04 ಜನ ಮಕ್ಕಳಿದ್ದು, ನಾನು ಹಿರಿಯ ಮಗನಾಗಿದ್ದು, ಮೃತ ಹರೀಶ ಕೊನೆಯ ಮಗನಾಗಿದ್ದು ನಾವೆಲ್ಲರೂ ಸಂಸಾರ ಸಮೇತ ಬೇರೆ ಬೇರೆ ಮನೆಗಳಲ್ಲಿ ವಾಸವಿರುತ್ತೇವೆ. ಮೃತ ಹರೀಶನಿಗೆ ಇಬ್ಬರು ಮಕ್ಕಳಿದ್ದು, ಒಬ್ಬ ಗಂಡು ಮಗ ಹಾಗೂ ಒಬ್ಬ ಹೆಣ್ಣು ಮಗಳಿರುತ್ತಾಳೆ. 1 ಹಾಗೂ 3 ನೇ ಆರೋಪಿತರ ಪರಿಚಯ ನನಗೆ ಇದ್ದು ಇಬ್ಬರು ನಮ್ಮ ಊರಿನವರೇ ಆಗಿದ್ದು, ಅಣ್ಣ ತಮ್ಮಂದಿರಾಗಿರುತ್ತಾರೆ. 2 ನೇ ಆರೋಪಿ ನನಗೆ ಪರಿಚಯವಿಲ್ಲ ಆದರೆ, ಆಕೆ 3 ನೇ ಆರೋಪಿಯ ಹೆಂಡತಿಯಾಗಿರುತ್ತಾಳೆ.

2. ಮೃತ ಹರೀಶನು ತನ್ನ ಜೀವಿತಾವಧಿಯಲ್ಲಿ ವ್ಯವಸಾಯದಲ್ಲಿ ನಿರತನಾಗಿದ್ದನು. ಆತನ ಸಾಂಸಾರಿಕ ಜೀವನ ಚೆನ್ನಾಗಿಯೇ ಇತ್ತು. ಹರೀಶ ಈಗ ಬದುಕಿರುವುದಿಲ್ಲ. ಆತ ಮೃತಪಟ್ಟ ವಿಚಾರವನ್ನು ದಿಃ 18.01.2022 ರಂದು ರಾತ್ರಿ 08.30 ರ ಸಮಯಕ್ಕೆ ಚಾಸಾ-3 ರವರ ಮುಖಾಂತರ ಫೋನ್ ಮೂಲಕ ತಿಳಿದುಕೊಂಡಿದ್ದು, ಆತನನ್ನು ಕೊಣನೂರಿನ ಒಂದು ಲಾಡ್ಜನಲ್ಲಿ ಕೊಲೆ ಮಾಡಿರುತ್ತಾರೆ ಎಂಬಂತೆ ತಿಳಿದುಕೊಂಡೆ. ಚಾಸಾ-3 ರವರಿಗೆ 3 ನೇ ಆರೋಪಿಯಾದ ದಿಲೀಪ ಕುಮಾರ ಫೋನ್ ಮುಖಾಂತರ ತಾನು ಹಾಗೂ 1 ನೇ ಆರೋಪಿ ಲಕ್ಷ್ಮಣ ಇಬ್ಬರೂ ಸೇರಿ ಹರೀಶನನ್ನು ಕೊಲೆ ಮಾಡಿದ್ದೇವೆ ಎಂಬುದಾಗಿ ಚಾಸಾ-3 ಸುನೀಲನಿಗೆ ತಿಳಿಸಿರುತ್ತಾನೆ. ವಿಚಾರವನ್ನು ತಿಳಿದು ಕೂಡಲೇ ನಾನು ಹಾಗೂ ನನ್ನ ಮಗ ಕೊಣನೂರಿನ ಲಾಡ್ಜಿನ ಬಳಿ ಬಂದಿದ್ದು, ಆ ಸಮಯಕ್ಕೆ ಪೋಲಿಸರು 1 ನೇ ಆರೋಪಿಯನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದರು. ನಂತರ ನಾನು ಶವವನ್ನು ನೋಡಲಾಗಿ ನನ್ನ

ತಮ್ಮನಾದ ಹರೀಶನನ್ನು ಗುರುತಿಸಿರುತ್ತೇನೆ ಹಾಗೂ ಶವ ದೊರೆತ ಸ್ಥಳವು ರಕ್ತಸಿಕ್ತವಾಗಿದ್ದು, ಆತನ ಕತ್ತಿನ ಭಾಗ ಬೆನ್ನಿನ ಭಾಗ ಕೈಗಳು, ಸೊಂಟದ ಭಾಗ ಎಲ್ಲವೂ ಗಾಯವಾಗಿತ್ತು ಹಾಗೂ ಆತನ ಕಣ್ಣಿಗೆ ಖಾರದ ಪುಡಿಯನ್ನು ಎರೆಚಲಾಗಿತ್ತು. ಸಾಕ್ಷಿಯು ಮೃತ ಹರೀಶನ ಶವ ಹಾಗೂ ಆತನ ಮೇಲೆ ಆಗಿದ್ದಂತಹ ಗಾಯಗಳು ಕಂಡುಬರುವ ಎರಡು ಛಾಯಾಚಿತ್ರಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ-8 ಎಂದು ಗುರುತಿಸಲಾಯಿತು.

3. ಘಟನೆಗೂ ಮುಂಚೆ 1 ಹಾಗೂ 3 ನೇ ಆರೋಪಿತರ ಮೃತ ಹರೀಶನಿಂದ ರೂ.90,000/- ಹಾಗೂ ಒಂದು ಚಿನ್ನದ ಸರವನ್ನು ತಮ್ಮ ವೈಯಕ್ತಿಕ ಖರ್ಚಿಗಾಗಿ ಸಾಲವಾಗಿ ತೆಗೆದುಕೊಂಡಿದ್ದರು ಎಂಬುವ ವಿಚಾರ ನನಗೆ ತಿಳಿದಿದ್ದು, ಆಗಾಗ್ಗೆ ಈ ಸಂಬಂದ 1 ಹಾಗೂ 3 ನೇ ಆರೋಪಿ ಹಾಗೂ ಮೃತ ಹರೀಶನ ನಡುವೆ ಸಣ್ಣಪುಟ್ಟ ಜಗಳವೂ ಸಹ ಆಗಿರುತ್ತದೆ. ನಂತರ ಆರೋಪಿತರು ರೂ.30,000/- ನ್ನು ನಮ್ಮ ಊರಿನ ಹಬ್ಬದ ಸಮಯದಲ್ಲಿ ಹಿಂತಿರುಗಿಸಿದ್ದರು. ಹೀಗೆ ಒಂದು ದಿನ ಮೂರು ಜನ ಆರೋಪಿತರು ಸೇರಿ ಮೃತ ಹರೀಶನನ್ನು ತಾನು ಬೆಂಗಳೂರಿಗೆ ಬಂದರೆ ಹಣ ಕೊಡುವುದಾಗಿ ತಿಳಿಸಿದ್ದು, ಆತ ತನ್ನ ಮಗಳ ಜೊತೆ ಹೋಗಿದ್ದು ಆ ಸಮಯಕ್ಕೆ ಮೃತ ಹರೀಶನ ಜೊತೆ 3-4 ಜನ ಇದ್ದ ಕಾರಣ ಆರೋಪಿತರು ಆತನನ್ನು ಕೊಲೆ ಮಾಡಲು ಸಾಧ್ಯವಾಗದ ಕಾರಣ ಅವರು ಕೊಣನೂರಿನ ಲಾಡ್ಜ್‌ಗೆ ಕರೆಸಿಕೊಂಡು ಕೊಲೆ ಮಾಡಿರುತ್ತಾರೆ. ಅದಕ್ಕೂ ಮುಂಚೆ ಮೃತ ಹರೀಶನು ತನಗೆ ತನ್ನ ಮಗಳ ಕಣ್ಣಿನ ಶಸ್ತ್ರಚಿಕಿತ್ಸೆಗೆ ಹಣದ ಅವಶ್ಯಕತೆ ಇದ್ದ ಕಾರಣ ಆತ ತನಗೆ ಬರಬೇಕಿದ್ದ ಭಾಗದ ಜಮೀನನ್ನು ನನಗೆ ರೂ.5 ಲಕ್ಷಕ್ಕೆ ತೆಗೆದುಕೋ ಎಂದು ಸಹ ಕೇಳಿಕೊಂಡಿದ್ದನು. ಆನಂತರ ಒಂದು ದಿವಸ 2 ನೇ ಆರೋಪಿ ಸುಶ್ಮಿತಾ ಕೊಣನೂರಿನ ಲಾಡ್ಜ್‌ಗೆ ಮೃತ ಹರೀಶನನ್ನು ಕರೆಸಿಕೊಂಡು ಲಾಡ್ಜ್‌ನ 1 ನಂಬರಿನ ರೂಮಿನಲ್ಲಿ ಆತನ ಕಣ್ಣಿಗೆ ಖಾರದ ಪುಡಿ ಎರಚಿ ಆರೋಪಿತರು ಕಬ್ಬಿಣದ ಕತ್ತಿಯಿಂದ ಹಾಗೂ ಚಾಕುವಿನಿಂದ ಕುತ್ತಿಗೆ ಹಾಗೂ ದೇಹದ ಇತರ ಭಾಗಗಳಿಗೆ ಚುಚ್ಚಿ ಕೊಲೆ ಮಾಡಿರುತ್ತಾರೆ ಎಂದು ತಿಳಿದುಕೊಂಡೆ. ಈ ಸಂಬಂದ ಪೋಲಿಸರು ಘಟನೆ ನಡೆದ ಮೂರು ದಿವಸಗಳ ನಂತರ ನಮ್ಮ ಗ್ರಾಮಕ್ಕೆ ಬಂದು ನನ್ನ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತಾರೆ. ಸದರಿ ಹೇಳಿಕೆಯಲ್ಲಿ ಈ ಮೇಲೆ ಹೇಳಿದ ವಿಚಾರವನ್ನು ಬಿಟ್ಟು ಬೇರೆ ಯಾವ ವಿಚಾರವನ್ನು ಹೇಳಿರುವುದಿಲ್ಲ.

(ಈ ಸಂದರ್ಭದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ದಾಖಲೆಗಳನ್ನು ಪರಿಶೀಲಿಸಿ, ಪಾಟೀಸವಾಲಿಗೆ ಅನುಮತಿ ನೀಡಿದೆ)

**<u>ಪಾಟೀಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>**

4. ನಾನು ಪೋಲಿಸರಿಗೆ ನೀಡಿದ ಹೇಳಿಕೆಯಲ್ಲಿ ಮೃತ ಹರೀಶನನ್ನು ಸುಶ್ಮಿತಾಳು ತಾನು, ಲಕ್ಷ್ಮಣ ಹಾಗೂ ದಿಲೀಪ್ ಕುಮಾರ ಸೇರಿ ಕೊಲೆ ಮಾಡಿರುತ್ತೇವೆ ಎಂಬುವ ವಿಚಾರವನ್ನು ಸುಶ್ಮಿತಾಳು ಪೋನ್ ಮುಖಾಂತರ ಚಾಸಾ-3 ಸುನೀಲನಿಗೆ ತಿಳಿಸಿದ್ದಳು ಎಂಬುವ ವಿಚಾರವನ್ನು ನಾನು ಚಾಸಾ-3 ರವರ ಮುಖಾಂತರ ತಿಳಿದುಕೊಂಡಿರುತ್ತೇನೆ ಎಂಬುದಾಗಿ ಹೇಳಿರುತ್ತೇನೆ ಎಂದರೆ ಸರಿ. ಮುಂದುವರಿದು 3 ನೇ ಆರೋಪಿ ದಿಲೀಪ್ ಕುಮಾರನಿಗೆ ಅಪಘಾತವಾಗಿದ್ದ ಕಾರಣ 2 ನೇ ಆರೋಪಿ ಸುಶ್ಮಿತಾ ತನ್ನ ತಮ್ಮನಾದ ಮೃತ ಹರೀಶನಿಂದ ರೂ.90,000/- ಹಣ ಹಾಗೂ 10 ಗ್ರಾಂ ಚಿನ್ನದ ಸರವನ್ನು ಸಾಲವಾಗಿ ತೆಗೆದುಕೊಂಡಿದ್ದಳು ಎಂಬುವ ವಿಚಾರ ನನಗೆ ತಿಳಿದಿತ್ತು ಎಂಬಂತೆ ನನ್ನ ಹೇಳಿಕೆಯಲ್ಲಿ ತಿಳಿಸಿರುತ್ತೇನೆ ಎಂದರೆ ಸರಿ.

**<u>ಪಾಟೀಸವಾಲುಃ 1 ಹಾಗೂ 3 ನೇ ಆರೋಪಿತರ ಪರ ಶ್ರೀ. ಎಸ್.ಕೆ.ಆರ್ ವಕೀಲರಿಂದ ಎಸ್.ಎಸ್.ಹೆಚ್ ವಕೀಲರ ಪರವಾಗಿಃ</u>**

ಈ ಸಂದರ್ಭದಲ್ಲಿ 1 ಹಾಗೂ 3 ನೇ ಆರೋಪಿತರ ಪರ ವಕೀಲರು ಸಮಯ ಕೋರಿದ್ದು, ಯಾವುದೇ ಸಕಾರಣಗಳು ಇಲ್ಲದ ಕಾರಣ ಪಾಟೀಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

**<u>ಪಾಟೀಸವಾಲುಃ 2 ನೇ ಆರೋಪಿ ಪರ ಶ್ರೀ ಎಸ್.ಕೆ.ಆರ್ ವಕೀಲರಿಂದ ಆರ್.ಎನ್.ಜೆ ವಕೀಲರ ಪರವಾಗಿಃ</u>**

ಈ ಸಂದರ್ಭದಲ್ಲಿ 2 ನೇ ಆರೋಪಿ ಪರ ವಕೀಲರು ಸಮಯ ಕೋರಿದ್ದು, ಯಾವುದೇ ಸಕಾರಣಗಳು ಇಲ್ಲದ ಕಾರಣ ಪಾಟೀಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

**<u>ಮರು ವಿಚಾರಣೆಃ</u>** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಸಮಕ್ಷಮ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ

3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ಹಾಸನ.